ಶ್ರೀ ಎಸ್. ಸಿದ್ಧಪ್ಪ.—ಸಾಲ ಪಡೆದಿರುವವರು ಯಾವ ಉದ್ದೇಶಕ್ಕಾಗಿ ಸಾಲ ತೆಗೆದುಕೊಂಡಿದ್ದಾರೋ ಆ ಉದ್ದೇಶಕ್ಕಾಗಿ ಹಣವನ್ನು ಉಪಯೋಗಿಸದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿದ್ದರೆ, ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕಾನೂನು ಪ್ರಕಾರವಾಗಿ ಅವರ ಮೇಲೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಮಸಿಯಪ್ಪ.—335 ಸಾಲದ ಅರ್ಜಿಗಳ ಪೈಕಿ, personal security ಮೇಲೆ ಬಂದ ಸಾಲದ ಅರ್ಜಿಗಳೆಷ್ಟು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಬಹುಶಃ 335 ಸಾಲದ ಅರ್ಜಿಗಳೂ personal security ಮೇಲೆಯೇ ಎಂದು ಕಾಣುತ್ತದೆ.

ಶ್ರೀ ವಿ ಮಸಿಯಪ್ಪ.—Personal security ಮೇಲೆ ಮಾತ್ರವೇ ಸಾಲವನ್ನು ಕೊಡಬೇಕೆಂದು ಆಜ್ಞೆ ಹೊರಡಿಸಿಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ವಿಷಯದಲ್ಲಿ ಸರ್ಕಾರದವರು ಇನ್ನೂ ಆಜ್ಞೆಯನ್ನು ಹೊರಡಿಸಿಲ್ಲ.

ಶ್ರೀ ವಿ. ಮಸಿಯಪ್ಪ.—Personal security ಮೇಲೆ loan applications ಹಾಕಿರುವವರು ಎಷ್ಟು ಜನ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನೋಟೀಸ್ ಬೇಕು.

ಶ್ರೀ ವಿ. ಮಸಿಯಪ್ಪ.—ರೂರಲ್ ಇಂಡಸ್ಟ್ರಿಯಲೈಜೇಷನ್ ಸ್ಕೀಮು ಪ್ರಕಾರವಾಗಿ ಕೋ-ಆಪರೇಟಿವ್ ಸೊಸೈಟಿಯವರು Personal security ಮೇಲೆ ಸಾಲವನ್ನು ಮಂಜೂರು ಮಾಡಬೇಕೆಂದು ಸರ್ಕಾರದ ಗಮನಕ್ಕೆ ತರಲಿಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—Personal security ಮೇಲೆ ಸಾಲವನ್ನು ಮಂಜೂರು ಮಾಡಬೇಕೆಂದು ಸರ್ಕಾರದ ಮೇಲೆ ಒತ್ತಾಯ ಬರುತ್ತಿದೆ. ಆ ವಿಷಯದಲ್ಲಿರುವ ಸಾಧಕ ಬಾಧಕಗಳನ್ನು ಸರ್ಕಾರದವರು ಪುನರ್-ಆಲೋಚನೆ ಮಾಡುತ್ತಾರೆ.

ಶ್ರೀ ವಿ. ಮಸಿಯಪ್ಪ.—ಯಾವಾಗ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸ್ವಲ್ಪ ಕಾಲಾವಕಾಶ ಬೇಕಾಗಬಹುದು. ಈಗ ತಾನೇ ಅಧಿಕಾರಿಗಳಿಂದಿಗೆ ನಡೆದ ಮೀಟಿಂಗ್‌ನಲ್ಲಿ ಆ ವಿಚಾರವನ್ನು ಪರಿಶೀಲನೆ ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ.—Personal security ಮೇಲೆ ಸಾಲ ಕೊಡಬೇಕೆಂದು order ಆಗಿದ್ದರೂ ಅದನ್ನು ಇನ್ನು ಜಾರಿಗೆ ತರದೇ ಇರಲು ಕಾರಣವೇನು?

ಶ್ರೀ ಎಚ್. ಎಂ. ಚೆನ್ನಬಸಪ್ಪ.—Personal security ಮೇಲೆ ಸಾಲ ಕೊಡಬೇಕಾದರೆ ನಮ್ಮ ಹಣಕ್ಕೆ ಲೋಪ ಬರದಂತೆ ಮಾಡಬೇಕು. ಸರ್ಕಾರದವರು ಆ ರೂಲ್ಸ್‌ಗಳನ್ನು ಕಾನೂನು ಪ್ರಕಾರ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಪರಿಶೀಲನೆ ಮಾಡುವುದಕ್ಕೆ ಎಷ್ಟು ಕಾಲಾವಕಾಶಬೇಕಾಗುತ್ತದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—Personal security ಇಲ್ಲದೆ ಸಾಲ ಕೊಡಬೇಕು, ಸರ್ಕಾರದ ಹಣಕ್ಕೆ ಬಂದೋಬಸ್ತು ಇರಬೇಕು, ಅದು ದುರುಪಯೋಗವಾಗಬಾರದು. ಇದನ್ನೆಲ್ಲಾ ನೋಡಿ ಪರಿಶೀಲನೆ ಮಾಡಬೇಕಾಗುತ್ತದೆ. ಅದಕ್ಕಾಗಿ ಸ್ವಲ್ಪ ಕಾಲಾವಕಾಶವಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದನ್ನು ಆಗಲೇ ಸದಸ್ಯರಿಗೆ ತಿಳಿಸಿದೆ.

ಶ್ರೀ ಟಿ. ಹನುಮಯ್ಯ.—ಆ ರೀತಿಯಾಗಿ ಸಾಲವನ್ನು ಕೊಡುವುದಕ್ಕೆ ಬಡವರಿಗೆ ಅದಷ್ಟು ಜಾಗ್ರತೆಯಾಗಿ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದಷ್ಟು ಅನುಕೂಲಗಳನ್ನು ಮಾಡಿಕೊಡಬೇಕೆಂದು ಪ್ರಯತ್ನ ಮಾಡುತ್ತೇವೆ.

Hindustan Machine Tools Factory (Mysoreans and Scheduled Castes recruited).

Q.—541. Sri P. M. SWAMIDURAI (K. G. F.—Scheduled Castes).—

Will the Government be pleased to state :—

the number of Mysoreans and Scheduled Castes from our State the Hindustan Machine Tools Factory has recruited from the beginning and for the year 1954-55 ?

A.—Sri H. M. CHANNABASAPPA (Minister for Industries).—

Information is not available as this is a Government of India concern.

Sri P. M. SWAMIDURAI.—Will it be possible for the Government to obtain information from the Centre and furnish it at a later stage ?

*Sri H. M. CHANNABASAPPA.—The factory is not in legal obligation to furnish this statement and further I might inform the Hon'able Member that the lists of appointments made on the basis of depressed class community are not maintained by the factory.

Sri P. M. SWAMIDURAI.—Is it not a fact that the Mysore Government have invested some amount in the Hindustan Machine Tools Factory ?

Sri H. M. CHANNABASAPPA.—No.

ಶ್ರೀ ಕೆ. ಪ್ರಭಾಕರ್.—ನಮ್ಮ ಸಂಸ್ಥಾನದಿಂದ ಎಷ್ಟು ಮಂದಿ ಮೈಸೂರಿನವರನ್ನು ಈ ಫ್ಯಾಕ್ಟರಿಯವರು ನೇಮಿಸಿಕೊಂಡಿದ್ದಾರೆಂಬುದು ಸರ್ಕಾರಕ್ಕೆ ಗೊತ್ತಿಲ್ಲವೇ ?

Sri H. M. CHANNABASAPPA.—I have already submitted to this House that the list of people working in the factory on regional and communal basis is not maintained by the factory.